ಅಸಲು ದಾವಾ ನಂ.**113/2024**
ಪಿ.ಡಬ್ಲೂ.**01**

<u>ಸಾಕ್ಷಿಗೆ ದಿನಾಂಕಃ **10.09.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ **3** ಮತ್ತು **4** ಪರ ಶ್ರೀ. **S.B.K.**ವಕೀಲರಿಂದ.</u>

4. ರಿ.ಸ.ನಂ: 183 ಜಮೀನು ಪ್ರಸ್ತುತವಾಗಿ ನನ್ನ ಹೆಸರಿನಲ್ಲಿ ಈಗ ಇರುವುದಿಲ್ಲ ಎಂದರೆ ಸರಿ. ಸದರಿ ಜಮೀನಿನ ಒಟ್ಟು ಕ್ಷೇತ್ರ 17 ಎಕರೆ 20 ಗುಂಟೆ ಇರುತ್ತದೆ. ಸದರಿ ಆಸ್ತಿಯು ನನ್ನ ಅಣ್ಣತಮ್ಮಂದಿರ ಪಾಲಿಗೆ ಬಂದಿದ್ದು ಅವರೆ ಈಗ ಕಬ್ಜಾ ಮತ್ತು ವಹಿವಾಟದಲ್ಲಿ ಇರುತ್ತಾರೆ ಎಂದರೆ ಸರಿ. ರಿ.ಸ.ನಂ: 183 ಜಮೀನಿನ ಬದಲಾಗಿ 3 ಮತ್ತು 4 ನೇ ಪ್ರತಿವಾದಿಗೆ ಬೆಊಎ ಆಸ್ತಿಯನ್ನು ಕೊಡುತ್ತೇವೆ ಎಂಬ ವಿಚಾರದ ಬಗ್ಗ ನನ್ನ ಅಣ್ಣತಮ್ಮಂದಿರಿಗೆ ಕಬೂಲು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಸಹೋದರರಿಗೆ ಸದರಿ ವಿಚಾರವಾಗಿ ಯಾವುದೇ ಮಾತುಕತೆ ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನನಗೆ ಸಂಬಂಧ ಇಲ್ಲದೇ ರಿ.ಸ.ನಂ: 19/1 ಬದಲಾಗಿ ರಿ.ಸ.ನಂ: 183 ಜಮೀನನ್ನು ಕೊಡುತ್ತೇನೆ ಎಂದು ನಾನು ಖೊಟ್ಟಿ ರೀತಿಯಲ್ಲಿ ವಾದ ಪತ್ರದಲ್ಲಿ ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

2. ರಿ.ಸ.ನಂ: 19/1 ಜಮೀನಿನ ಕಿಮ್ಮತ್ತು ರೂ. 15 ರಿಂದ 20 ಲಕ್ಷ ಇರುತ್ತದೆ ಎಂದರೆ ಸಾಕ್ಷಿ ಸುಮಾರು 10 ಲಕ್ಷ ಬೆಲೆ ಇರಬಹುದು ಎಂದು ನುಡಿಯುತ್ತಾರೆ. ರಿ.ಸ.ನಂ: 183 ಜಮೀನು ಮರಡಿ ಜಮೀನು ಆಗಿರುತ್ತದೆ ಎಂದರೆ ಸಾಕ್ಷಿ ಎರಿ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಅದರ ಕಿಮ್ಮತ್ತು ಈಗ 2 ರಿಂದ 3 ಲಕ್ಷ ಇದೆ ಎಂದರೆ ಸಾಕ್ಷಿ ಅದು ಸಹ ರೂ, 10 ಲಕ್ಷ ಬೆಲೆ ಇರಬಹುದು ಎಂದು ನುಡಿಯುತ್ತಾರೆ. ಈ ಮೊದಲು ದಾವಾ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ಕುಟುಂಬದವರು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಮಾರು ವರ್ಷಗಳ ನಂತರ ಈಗ ಸದರಿ ಜಮೀನಿನ ಬೆಲೆ ಹೆಚ್ಚಿಗೆ ಆಗಿದ ಕಾರಣ ತೊಂದರೆ ಕೊಡಲು ವಿನಾ ಕಾರಣ ಈ ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3. 3 ಮತ್ತು 4 ನೇ ಪ್ರತಿವಾದಿಗೆ ಅನ್ಯಾಯ ಮಾಡಲು ನನ್ನ ಹೆಸರಿನಲ್ಲಿ ದಾವಾ ಆಸ್ತಿ ಇಲ್ಲದಿದ್ದರು ಸಹ ನಮ್ಮ ಕುಟುಂಬದವರ ಸಮ್ಮತಿ ಇಲ್ಲದೆ ಇದ್ದರು ಸಹ ಖೊಟ್ಟಿ ರೀತಿಯಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಹೋದರರ ಒಪ್ಪಿಗೆಯನ್ನು ತಂದು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ನನಗೆ ಆಗುವುದಿಲ್ಲ. ಸದರಿ ಆಸ್ತಿಗೆ ಸಂಬಂಧಿಸಿದಂತೆ ನನ್ನ ಸಹೋದರರಿಗೆ ಒಪ್ಪಿಗೆ ಇರುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ನಾನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಖೊಟ್ಟಿ ಸಂಗತಿಗಳನ್ನು ನನ್ನ ಹೆಸರಿನಲ್ಲಿ ಆದೇಶವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಿ.ಸ.ನಂ: 183 ರಲ್ಲಿ ನನಗೆ ಯಾವುದೇ ರೀತಿಯ ಪಾಲು ವ ಹಕ್ಕು ಇರುವುದಿಲ್ಲ. ನನ್ನ ಹೆಸರಿನಲ್ಲಿ ಈ ದವಾ ಆಸ್ತಿಯನ್ನು ಹೊರತು ಪಡಿಸಿ ರಿ.ಸ.ನಂ: 166 ಕ್ಷೇತ್ರ 14 ಎಕರೆ 17 ಗುಂಟೆ ಜಮೀನು ಇರುತ್ತದೆ. ಸದರಿ ನನ್ನ ಆಸ್ತಿಯನ್ನು ಬದಲಾಯಿಸಿ ಪ್ರತಿವಾದಿಗೆ ಕೊಡಲು ನನಗೆ ಸಮ್ಮತಿ ಇರುವುದಿಲ್ಲ.

5. ಬೇರೆಯವರ ಹೆಸರಿನಲ್ಲಿ ಆಸ್ತಿಯನ್ನು ಪ್ರತಿವಾದಿಗಳಿಗೆ ಕೊಡಲು ನಾನು ಖೊಟ್ಟಿ ರೀತಿಯಲ್ಲಿ ಈ ದಾವೆಯನ್ನು ಸಲ್ಲಿಸಿ ಈ ದಿನ ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2011 ರಿಂದ ಇಲ್ಲಿಯವರೆಗೆ 3 ಮತ್ತು 4 ನೇ ಪ್ರತಿವಾದಿ ದಾವಾ ಆಸ್ತಿಯ ಕಬ್ಜೆಗೆ ನಾವು ಯಾವತ್ತು ಸಹ ತಂಟೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿ ದಾವಾ ಆಸ್ತಿಯ ಮೇಲೆ ಅವಲಂಭಿತರು ಆಗಿರುತ್ತಾರೆ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿ ಅಭೀವೃದ್ಧಿಗೊಳಿಸಿದ ಆಸ್ತಿಯನ್ನು ಎತ್ತಿ ಹಾಕಲು ನನ್ನ ಮರಡಿ ಜಮೀನನ್ನು ಅವರಿಗೆ ಬದಲಾಗಿ ಕೊಡಲು ಈ ಖೊಟ್ಟಿ ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯಲ್ಲಿ 3 ಮತ್ತು 4 ನೇ ಪ್ರತಿವಾದಿ ಹೆಸರಿನಲ್ಲಿ ಆದೇಶ ಆಗಿರುತ್ತದೆ ಎಂದರೆ ನನ್ನ ಹೆಸರಿನಲ್ಲಿ ಆದೇಶ ಆಗಿರುತ್ತದೆ ಎಂದು ನುಡಿಯುತ್ತಾರೆ. ಕಾನೂನುಬದ್ಧವಾಗಿ ಸರಕಾರದವರು ದಾವಾ

ಜಮೀನನ್ನು 3 ಮತ್ತು 4 ನೇ ಪ್ರತಿವಾದಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ.

6. ನಾನು ಸತ್ಯ ಸಂಗತಿಗಳನ್ನು ಮುಚ್ಚಿಟ್ಟು ಮಾನ್ಯ ಉಚ್ಚ ನ್ಯಾಯಾಲಯದಿಂದ ಖೊಟ್ಟಿ ಆದೇಶವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಖೊಟ್ಟಿ ಅಂಶಗಳನ್ನು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನ್ನ ಮತ್ತು ನನ್ನ ಕುಟುಂಬದವರ ಯಾವುದೇ ರೀತಿಯ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸುಳ್ಳು ವಿಷಯಗಳನ್ನು ಬರೆಯಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರದವರು ನ್ಯಾಯಬದ್ಧವಾಗಿ ಎಲ್ಲಾ ನಿಯಮಗಳನ್ನು ಪಾಲಿಸಿ 3 ಮತ್ತು 4 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ 6 ರಿಂದದ 9 ನೇ ಪ್ರತಿವಾದಿಗಳು 3 ಮತ್ತು 4 ನೇ ಪ್ರತಿವಾದಿಯ ಕಬ್ಜೆಗೆ ಯಾವುದೇ ತಕರಾರು ಇರುವುದಿಲ್ಲ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

7. 3 ಮತ್ತು 4 ನೇ ಪ್ರತಿವಾದಿ ಅನಕ್ಷರಸ್ಥರು ಇದ್ದು ಅದನ್ನು ದುರುಪಯೋಗ ಪಡೆದುಕೊಂಡು ನಾನು ಮೇಲಿಂದ ಮೇಲೆ ಅವರ ಮೇಲೆ ಖೊಟ್ಟಿ ಪ್ರಕರಣಗಳನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಯ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇಲ್ಲದಿದ್ದರು ಸಹ ವಿನಾ ಕಾರಣ ಅವರಿಗೆ ತೊಂದರೆ ಕೊಡಲು ಖೊಟ್ಟಿ ದಾವೆಯನ್ನು ಹೂಡಿ ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿಯಲ್ಲ. ರಿ.ಸ.ನಂ: 183 ಜಮೀನನ್ನು ಮರಳಿ 3 ಮತ್ತು 4 ನೇ ಪ್ರತಿವಾದಿಗೆ ಕೊಡಬೇಕು ಎಂಧು ನನ್ನ ಸಹೊದರರು ನನಗೆ ಯಾವುದೇ ರೀತಿಯ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ಈಗ ರಿ.ಸ.ನಂ: 183, 6 ರಿಂದ 9 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ರಿ.ಸ.ನಂ: 183 ರಲ್ಲಿ ನನಗೆ ಯಾವುದೇ ರೀತಿಯ ಪಾಲು ಬರುವುದಿಲ್ಲ. ಆದ ಕಾರಣ ನಾನು

ನ್ಯಾಯಾಲಯದ ಮುಂದೆ ಖೊಟ್ಟಿ ವಾದ ಪತ್ರ ಮತ್ತು ಖೊಟ್ಟಿ ಶಪಥ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿ ವಕೀಲರಿಗೆ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕೊಟ್ಟು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

(ಎ.ಆರ್.ಎ.ಮುಲ್ಲಾ)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ. ಸಿಂದಗಿ.